GSTIN : 29AAAAV3948F1Z8

ನೋಂದಣಿ ಸಂಖ್ಯೆ : ಡಿ.ಆರ್.ಎಸ್./ಆರ್.ಎಸ್.ಆರ್. ನೋಂದಣಿ C.R. / 19/475/2004–05 ದಿ. 10–5–2005

# ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : 'ರಾಗಾ', 5ನೇ ತಿರುವು, 1ನೇ ಹಂತ, ವಿನೋಬನಗರ, ಶಿವಮೊಗ್ಗ–577204

ಮೊ. : 9448727070 e.mail:ho@viprasouharda.com web :viprasouharda.com

## ಸಹಕಾರಿಯ 2025–26ನೇ ಸಾಲಿನ

# 21ನೇ ಸರ್ವ ಸದಸ್ಯರ ಸಭೆಯ ತಿಳುವಳಿಕೆ ಪತ್ರ

ಸನ್ಮಾನ್ಯ ಸದಸ್ಯ ಬಾಂಧವರೇ,

ದಿನಾಂಕ 12–07–2026ರ ಭಾನುವಾರ ಬೆಳಿಗ್ಗೆ 11–00 ಗಂಟೆಗೆ **ಶ್ರೀಮಾತಾ ಮಾಂಗಲ್ಯ ಮಂದಿರ**
ಬಿ ಹೆಚ್ ರಸ್ತೆ ಶಿವಮೊಗ್ಗದಲ್ಲಿ ಸಹಕಾರಿಯ 2025–26ನೇ ಸಾಲಿನ
ಸರ್ವ ಸದಸ್ಯರ ಸಭೆಯು ಸಹಕಾರಿಯ ಅಧ್ಯಕ್ಷರಾದ

**ಶ್ರೀ ಪ್ರಸನ್ನಕುಮಾರ್ ಎ.ಆರ್.**

ಇವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ದಯವಿಟ್ಟು ಈ ಸಭೆಯಲ್ಲಿ ಉಪಸ್ಥಿತರಿದ್ದು ಸಹಕಾರಿಯ ಮುಂದಿನ ಯೋಜನೆಗಳು ಅನುಷ್ಠಾನಗೊಳ್ಳುವಲ್ಲಿ ಮಾರ್ಗದರ್ಶಕರಾಗಲು ವಿನಂತಿಸಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ದಿನಾಂಕ : 13–06–2026
ಸ್ಥಳ : ಶಿವಮೊಗ್ಗ

**ಮಾಲತಿ ಎಂ.ಪಿ.**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

## –: ಕಾರ್ಯಸೂಚಿ :–

1. ಸಭಾ ತಿಳುವಳಿಕೆ ಪತ್ರ ಓದಿ ದಾಖಲಿಸುವ ವಿಷಯ.
2. ದಿನಾಂಕ 31–08–2025 ರಂದು ನಡೆದ 2024–25ನೇ ಸಾಲಿನ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಅವಲೋಕಿಸಿ ದಾಖಲಿಸುವ ವಿಷಯ.
3. 2025–26ನೇ ಸಾಲಿನ ಆಡಳಿತ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ವಿಷಯ.
4. 2025–26ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳನ್ನು ಮತ್ತು ಆಡಿಟ್ ವರದಿಯನ್ನು ಅವಲೋಕಿಸಿ ಅಂಗೀಕರಿಸುವ ವಿಷಯ.
5. 2025–26 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅವಲೋಕಿಸಿ ಅನುಮೋದಿಸುವ ವಿಷಯ.
6. 2025–26ನೇ ಸಾಲಿನಲ್ಲಿ ಮಂಜೂರಾದ ಬಜೆಟ್‌ಗಿಂತ ಹೆಚ್ಚು ಖರ್ಚಾದ ಮೊಬಲಗಿಗೆ ಅನುಮೋದನೆ ನೀಡುವ ವಿಷಯ.
7. 2026–27ನೇ ಸಾಲಿನ ಬಜೆಟ್ ಮಂಜೂರು ಮಾಡುವ ಬಗ್ಗೆ ಅನುಮೋದಿಸುವ ವಿಷಯ.
8. 2027–28ನೇ ಸಾಲಿನ ಅಂದಾಜು ಮುಂಗಡ ಬಜೆಟ್ ಮಂಡನೆ ಹಾಗೂ ಅನುಮೋದನೆ ವಿಷಯ.
9. ಸೌಹಾರ್ದ ಸಹಕಾರಿ(ತಿದ್ದುಪಡಿ) ಅಧಿನಿಯಮ ಕಲಂ 33(1) ಮೇರೆಗೆ ಲೆಕ್ಕಪರಿಶೋಧನಾ ನಿರ್ದೇಶಕರಿಂದ ಅಂತರ್ಜಾಲದಲ್ಲಿ ಪ್ರಕಟಗೊಂಡ ಪಟ್ಟಿಯಲ್ಲಿರುವ ಓರ್ವ ಲೆಕ್ಕಪರಿಶೋಧಕರನ್ನು ಸಹಕಾರಿಯ 2026–27ನೇ ಸಾಲಿನ ಲೆಕ್ಕ ಪತ್ರ ಪರಿಶೀಲನೆಗೆ ನೇಮಕ ಮಾಡುವ ಹಾಗೂ ಅವರಿಗೆ ಸಂಭಾವನೆಯನ್ನು ನಿರ್ಧರಿಸುವ ವಿಷಯ.
10. 2026–27ನೇ ಸಾಲಿನ ಲೆಕ್ಕಪತ್ರಗಳನ್ನು ಪರಿಶೀಲಿಸಲು ಆಂತರಿಕ ಲೆಕ್ಕಪರಿಶೋಧಕರ ನೇಮಕಾತಿ ಅನುಮೋದನೆ ವಿಷಯ.

ಪು.ತಿ.ನೋ.

11. 2025–26ನೇ ಸಾಲಿನ ನಿವ್ವಳ ಲಾಭ ರೂ.32.21.931/–ಗಳನ್ನು ಸೌಹಾರ್ದ ಕಾಯ್ದೆ ಮತ್ತು ಸಹಕಾರಿಯ ಬೈಲಾ ಅನ್ವಯ ವಿಲೇವಾರಿ ಮಾಡುವ ವಿಷಯ.
12. ಸಹಕಾರಿಯ ಬೈಲಾ ಸಂಖ್ಯೆ 8ರ ಪ್ರಕಾರ ಅಧಿಕೃತ ಷೇರು ಬಂಡವಾಳ ಮಿತಿ ನಿರ್ಧರಿಸುವ ವಿಷಯ.
13. 2026–27ನೇ ಸಾಲಿಗೆ ಷೇರು ಹಂಚಿಕೆ ಮಿತಿ ನಿರ್ಧರಿಸುವ ವಿಷಯ(ಬೈಲಾ ನಂ.8(4)ರ ಅನ್ವಯ).
14. ಸಹಕಾರಿಯ ಹೆಸರಿನಲ್ಲಿ ರಾಷ್ಟ್ರೀಕೃತ ಅಥವಾ ಶೆಡ್ಯೂಲ್ ಬ್ಯಾಂಕ್‌ಗಳಲ್ಲಿ ರೂ.20ಕೋಟಿಯವರೆಗೆ ಸಾಲ ಪಡೆಯುವ ವಿಷಯ.
15. ಸಹಕಾರಿಯ ಸಿಬ್ಬಂದಿಗಳ ಪರಿಷ್ಕೃತ ವೇತನ ಶ್ರೇಣಿಯನ್ನು ಮಹಾಸಭೆ ಅನುಮೋದನೆ ನಿರೀಕ್ಷಿಸಿ 01–11–2025ರಿಂದ ಜಾರಿಗೆ ನೀಡಿರುವ ಕ್ರಮವನ್ನು ಅನುಮೋದಿಸುವ ವಿಷಯ
16. 2025–26ನೇ ಸಾಲಿನಲ್ಲಿ ಸುಸ್ತಿ ಸಾಲಗಾರರು/ಜಾಮೀನುದಾರರಿಂದ ಸಾಲ ತೀರುವಳಿ ಬಗ್ಗೆ ರಿಯಾಯಿತಿ ಕೋರಿ ಬಂದ ಅರ್ಜಿಗಳಿಗೆ ಆಡಳಿತ ಮಂಡಳಿಯ ತೀರ್ಮಾನದಂತೆ ರಿಯಾಯಿತಿ ನೀಡಿ ರೂ. 22,92,943/–ಎನ್.ಪಿ.ಎ ಪ್ರಾವಿಜನ್ ಖಾತೆಯಿಂದ ವರ್ಗಾಯಿಸಿದ ಬಗ್ಗೆ ಮಂಡಿಸಿರುವ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ವಿಷಯ.
17. ರಿಪ್ಪನಪೇಟೆ ಮತ್ತು ಹೊಳೆಹೊನ್ನೂರುಗಳಲ್ಲಿ ಸಹಕಾರಿಯ ಹೊಸ ಶಾಖೆಗಳನ್ನು ತೆರೆಯುವ ಬಗ್ಗೆ ಮಹಾಸಭೆ ಅನುಮತಿ ಕೋರುವ ವಿಷಯ ಹಾಗೂ ಈ ಸಂಬಂಧ ಸಂಯುಕ್ತ ಸಹಕಾರಿಯ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸುವ ವಿಷಯ
18. ಸಹಕಾರಿಯ ಸಿಬ್ಬಂದಿ ಸೇವಾ ನಿಯಮಗಳ ಪರಿಷ್ಕರಣೆ ಮಾಡಿರುವುದನ್ನು ಅನುಮೋದಿಸುವ ವಿಷಯ.
19. ರಾಷ್ಟ್ರಮಟ್ಟದ ಸಹಕಾರಿ ಸಂಸ್ಥೆಗಳನ್ನು ಸಂದರ್ಶಿಸುವ ಸಲುವಾಗಿ ನಿರ್ದೇಶಕರು ಪ್ರವಾಸ ಕೈಗೊಳ್ಳುವ ಬಗ್ಗೆ ಅನುಮತಿ ಕೋರುವ ವಿಷಯ.
20. ಸಹಕಾರಿಯ ಹೆಸರಿಗೆ ಸ್ಥಿರಾಸ್ತಿ ಖರೀದಿ ಮಾಡಲು ಅನುಮತಿ ಕೋರುವ ವಿಷಯ.
21. ಸಹಕಾರಿಯ ದೀರ್ಘಾವಧಿ ಯೋಜನೆಗಳ ವಿವರ ಮಂಡನೆ.
22. ಸದಸ್ಯರಿಂದ ಬಂದ ಹಾಗೂ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿ ತೀರ್ಮಾನಿಸತಕ್ಕ ಇತರೆ ವಿಷಯಗಳು.

---

## ವಿಶೇಷ ಸೂಚನೆಗಳು :

1. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸನ್ಮಾನ್ಯ ಸದಸ್ಯರುಗಳು ಸಭಾ ದಿನಾಂಕಕ್ಕೆ ಏಳು ದಿನ ಮುಂಚಿತವಾಗಿ ಸಹಕಾರಿಯ ಪ್ರಧಾನ ಕಛೇರಿಗೆ ಲಿಖಿತ ಮೂಲಕ ತಲುಪಿಸತಕ್ಕದ್ದು.
2. 2025–26ರ ಲೆಕ್ಕ ಪರಿಶೋಧಿತ ಆರ್ಥಿಕ ತಃಖ್ತೆಯು ಸದಸ್ಯರ ಅವಗಾಹನೆಗಾಗಿ ಸಹಕಾರಿಯ ಪ್ರಧಾನ ಕಛೇರಿಯಲ್ಲಿ ಹಾಗೂ ಶಾಖಾ ಕಚೇರಿಗಳಲ್ಲಿ ಕೆಲಸದ ವೇಳೆಯಲ್ಲಿ ಲಭ್ಯವಿರುತ್ತದೆ.
3. 2025–26ನೇ ಸಾಲಿನ ಅಧಿಕೃತ ಲೆಕ್ಕ ಪತ್ರಗಳನ್ನು “ ವಾಟ್ಸಾಪ್ ಗ್ರೂಪ್ ಹಾಗೂ “ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
4. ಹಿಂದಿನ ಸಾಲಿನ ಡಿವಿಡೆಂಡ್ ಪಡೆಯದಿದ್ದಲ್ಲಿ ನಿಮ್ಮ ಹತ್ತಿರದ ಸಹಕಾರಿಯ ಶಾಖೆಗಳಲ್ಲಿ ಪಾವತಿ ಪಡೆಯಬಹುದಾಗಿದೆ.
5. ಗುರುತು ಪತ್ರ ಪಡೆಯದಿರುವ ಸದಸ್ಯರು ಎರಡು ಭಾವಚಿತ್ರಗಳನ್ನು ಶಾಖಾ ಕಛೇರಿಗೆ ನೀಡಲು ಕೋರಿದೆ.
6. ಮೂರು ವರ್ಷ ಮತ್ತು ಮೇಲ್ಪಟ್ಟ ಕೊಡತಕ್ಕ ಡಿವಿಡೆಂಡ್ ಅನ್ನು ಸದಸ್ಯರು ಪಾವತಿ ಪಡೆಯದಿದ್ದಲ್ಲಿ ನಿಯಮ ರೀತ್ಯ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
7. ಸೌಹಾರ್ದ ಸಹಕಾರಿ ಕಾಯ್ದೆ ರೀತ್ಯ ಸದಸ್ಯರುಗಳು ಕನಿಷ್ಟ ವ್ಯವಹಾರ ಮಾಡುವುದರೊಂದಿಗೆ ವಾರ್ಷಿಕ ಮಹಾಸಭೆಗೂ ಹಾಜಾರಾಗುವುದು ಕಡ್ಡಾಯವಾಗಿರುತ್ತದೆ.

**(ಸ್ಥಳದ ಲೊಕೇಷನ್)**